ನಿಪಪ-330A-ಕ

**ವಿಧಾನ ಪರಿಷತಿನ ಸದಸ್ಯರಾದ ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ವಿಷಯ:-**

ಅಕ್ಟೋಬರ್ 10ನ್ನು ವಿಶ್ವ ಜಾಗತಿಕ ವಸತಿ ರಹಿತರ ದಿನವನ್ನಾಗಿ ಆಚರಿಸಲಾಗುತ್ತಿದೆ. ಇದು ಕೇವಲ ಆಚರಣೆಗೆ ಸೀಮಿತವಾಗಿದ್ದು, ಕಾರ್ಯರೂಪಕ್ಕೆ ತರುವಂತಹ ಇಚ್ಛಾಶಕ್ತಿ ಕೊರತೆ ಕಾಣುತ್ತಿದೆ. ಜನರಿಂದ ಜನರಿಗಾಗಿ ಜನರೀಗೋಸ್ಕರ ಅಸ್ಥಿತ್ವಕ್ಕೆ ಬಂದ ಪ್ರಜಾಪ್ರಭುತ್ವ ಸರ್ಕಾರವು ಈ ವಿಷಯದಲ್ಲಿ ಜಾಣ ಕುರುಡು ಆಗಿರುವುದು ದುರದೃಷ್ಟಕರ.

ಇಂದಿನ ದಿನಪತ್ರಿಕೆ ವಿಜಯವಾಣಿಯ ಪುಟ ಸಂಖ್ಯೆ-3ರಲ್ಲಿ ವರದಿಯಾಗಿರುವಂತೆ 5000 ಜನರು ಬೀದಿಪಾಲು ಎಂಬ ಶೀರ್ಷಿಕೆ ಪ್ರಕಟವಾಗಿರುವಂತೆ ಜಗತ್ತಿನ ಅಷ್ಟೂ ಸೌಕರ್ಯಗಳನ್ನು ಹಾಸು ಹೊದ್ದು ಮಲಗಿರುವ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ 5000 ಅಧಿಕ ಜನರು ಬೀದಿಯಲ್ಲಿಯೇ ವಾಸಿಸುತ್ತಿದ್ದಾರೆ. ಸರಿಯಾದ ಊಟವಿಲ್ಲದೆ, ಮಲಗಲು ಜಾಗವಿಲ್ಲದೆ ಅತ್ಯಂತ ದಮನೀಯ ಸ್ಥಿತಿಯಲ್ಲಿ ಜೀವನ ದೂಡುತ್ತಿದ್ದಾರೆ.

ಪಾದಚಾರಿ ಮಾರ್ಗ, ಧಾರ್ಮಿಕ ಕೇಂದ್ರಗಳ ಆವರಣ ಉದ್ಯಾನಗಳು, ಫ್ಲೈಓವರ್ ಕೆಳಭಾಗದಲ್ಲಿ ಕಾಮಗಾರಿಗೆ ಇಟ್ಟ ಪೈಪುಗಳಲ್ಲಿ ಜೀವನ ನಡೆಸುತ್ತಿದ್ದಾರೆ. ಉದ್ಯೋಗ ಅರಸಿ ಬಂದವರು ಭಿಕ್ಷಕರು ಹಾಗೂ ಅನಾರೋಗ್ಯ ಪೀಡಿತರು, ಕುಟುಂಬದಿಂದ ಹೊರದಬ್ಬಿಸಿಕೊಂಡು ವೃದ್ಧರು, ಮನೆ ಬಿಟ್ಟು ಬಂದವರು ಮಲಗಲು ಜಾಗವಿಲ್ಲದೇ ಚಳಿ, ಮಳೆ, ಗಾಳಿ, ಅರೆ ಹಸಿವಿನಿಂದ ಕೆಂಗಟ್ಟವರು ವಸತಿ ಇಲ್ಲದೇ ಜೀವನ ನಡೆಸುತ್ತಿರುವುದನ್ನು ನೋಡಿದಾಗ ನಿಜಕ್ಕೂ ಮನ ಕಲಕುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು 2010ರಲ್ಲಿ ದೇಶದ 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಎಲ್ಲಾ ನಗರಗಳಲ್ಲೂ ತಂಗುದಾಣ ನಿರ್ಮಿಸಬೇಕೆಂದು ನಿರ್ದೇಶನ ನೀಡಿರುತ್ತದೆ. ಆದರೆ 1 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಬೆಂಗಳೂರಿನಲ್ಲಿ 102 ತಂಗುದಾಣ ಇರಬೇಕಾದ ಜಾಗದಲ್ಲಿ ಕೇವಲ 7 ತಂಗುದಾಣಗಳು ಇರುವುದು ನಮಗೆ ನೋವು ತರಿಸುವ ವಿಷಯವಾಗಿದೆ. ಸರ್ಕಾರವು ಈ ವಿಚಾರದಲ್ಲಿ ತುರ್ತು ಗಮನ ಹರಿಸಿ ತಂಗುದಾಣಗಳನ್ನು ನಿರ್ಮಿಸಿ, ಇಂತಹ ಜನರಿಗೆ ಆಶ್ರಯವನ್ನು ನೀಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಉತ್ತರ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಡೇ-ನಲ್ಮ್ ಯೋಜನೆಯಡಿ ನಗರ ವಸತಿ ರಹಿತರನ್ನು ಸಮೀಕ್ಷೆ ಮುಖಾಂತರ ಗುರುತಿಸಿರುವ ವಲಯವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರಮ ಸಂಖ್ಯೆ | ವಲಯಗಳ ಹೆಸರು | ವಲಯವಾರು ಸಮೀಕ್ಷೆಯ ವಿವರ |
|---|---|---|
| 1 | ಪೂರ್ವ | 1210 |
| 2 | ಪಶ್ಚಿಮ | 1526 |
| 3 | ದಕ್ಷಿಣ | 1255 |
| 4 | ಆರ್.ಆರ್. ನಗರ | 171 |
| 5 | ದಾಸರಹಳ್ಳಿ | 105 |
| 6 | ಯಲಹಂಕ | 211 |
| 7 | ಮಹದೇವಪುರ | 386 |
| 8 | ಬೊಮ್ಮನಹಳ್ಳಿ | 246 |
| | **ಒಟ್ಟು** | **5110** |

.2. . .

ಈ ವಿಷಯಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ರಾತ್ರಿ ತಂಗುದಾಣಗಳು ಚಾಲನೆಯಲ್ಲಿರುತ್ತವೆ. ಕೋ-ಆರ್ಡಿನೇಟರ್, ಕೇರ್ ಟೇಕರ್, ಸೆಕ್ಯೂರಿಟಿ, ಸ್ವಚ್ಚತ್ತಾಗಾರರು ಸಿಬ್ಬಂದಿಗಳನ್ನು ತಂಗುದಾಣ ನಿರ್ವಹಣೆ ಮಾಡಲು ತಾತ್ಕಲಿಕವಾಗಿ ನಿಯೋಜಿಸಲಾಗಿದೆ.

| ಕ್ರಸಂ | ವಲಯ | ಅಸ್ಥಿತ್ವದಲ್ಲಿರುವ ತಂಗುದಾಣಗಳ ವಿವರ | ಅಂದಾಜು ಪ್ರತಿದಿನ ತಂಗುದಾಣದಲ್ಲಿ ಉಳಿಯುವ ನಿರಾಶ್ರಿತರ ಸಂಖ್ಯೆ | ಕೇಂದ್ರದಲ್ಲಿ ನೀಡಿರುವ ಸೌಲಭ್ಯಗಳು |
|---|---|---|---|---|
| | ಪೂರ್ವ | ಮರ್ಫಿಟೌನ್ | 35 | |
| | ಪಶ್ಚಿಮ | ಶ್ರೀರಾಮ ಮಂದಿರ, ರಾಜಾಜಿನಗರ | 35 | ಕಾಟ್‌ಗಳು, ಬೆಡ್‌ಶೀಟ್ಸ್, ಕುಡಿಯುವ ನೀರಿನ ವ್ಯವಸ್ಥೆ, ಊಟ, ಫ್ಯಾನ್, ಟಿ.ವಿ, ಶೌಚಾಲಯ ವ್ಯವಸ್ಥೆ, ಪ್ರಥಮ ಚಿಕಿತ್ಸಾ ವ್ಯವಸ್ಥೆ, ಅಗ್ನಿ ಶಾಮಕ ವ್ಯವಸ್ಥೆ, ಇತ್ಯಾದಿ. |
| | ಪಶ್ಚಿಮ | ರಾಜಾಜಿನಗರ ಹೆರಿಗೆ ಆಸ್ಪತ್ರೆ ಹಿಂಬಾಗ | 14 | |
| | ಪಶ್ಚಿಮ | ಗಾಂಧಿನಗರ, ಕಾಟನ್ ಪೇಟೆ | 40 | |
| | ಪಶ್ಚಿಮ | ಓಲ್ಡ್ ಹೆಲ್ತ್ ಸೆಂಟರ್, ಉಪ್ಪಾರಪೇಟೆ | 20 | |
| | ಬೊಮ್ಮನಹಳ್ಳಿ | ಜಂಬೂಸವಾರಿ ದಿಣ್ಣೆ | 50 | |
| | ಮಹದೇವಪುರ | ಹೂಡಿ | 24 | |
| | ಯಲಹಂಕ | ಬಾಗಲೂರು ಕ್ರಾಸ್ ಹತ್ತಿರ | ಇತ್ತೀಚೆಗೆ ಪ್ರಾರಂಭಗೊಳಿಸಲಾಗಿದೆ. | |
| | ದಾಸರಹಳ್ಳಿ | ಟಿ. ದಾಸರಹಳ್ಳಿ | 30 | |

ನವೀಕರಿಸಲಾಗುತ್ತಿರುವ ರಾತ್ರಿ ತಂಗುದಾಣಗಳ ವಿವರ

| ಕ್ರಸಂ | ವಲಯ | ನವೀಕರಿಸಲಾಗುತ್ತಿರುವ ತಂಗುದಾಣಗಳ ವಿವರ |
|---|---|---|
| 1 | ಪೂರ್ವ | ವೈರ್‌ಮನ್ ಟ್ರೈನಿಂಗ್ ಸೆಂಟರ್, ಕ್ವೀನ್ಸ್ ರೋಡ್ |
| 2 | ಪೂರ್ವ | ಕೆಪಿಸಿಸಿ ಕಛೇರಿ ಎದುರು, ಕ್ವೀನ್ಸ್ ರೋಡ್ |
| 3 | ಪಶ್ಚಿಮ | ಎಸ್‌ಸಿ / ಎಸ್‌ಟಿ ಅಸೋಸಿಯೇಷನ್ ಬಿಲ್ಡಿಂಗ್, ತುಳಸಿ ತೋಟ |
| 4 | ಪಶ್ಚಿಮ | ಹೆಲ್ತ್ ಕಿಯೋಸ್ಕ್, ತುಳಸಿ ತೋಟ |
| 5 | ದಕ್ಷಿಣ | ಉಸ್ಮಾನ್‌ಖಾನ್ ರೋಡ್, ಕುಂಬಾರಗುಂಡಿ ಕೇಂದ್ರ -1 |
| 6 | ದಕ್ಷಿಣ | ಉಸ್ಮಾನ್‌ಖಾನ್ ರೋಡ್, ಕುಂಬಾರಗುಂಡಿ ಕೇಂದ್ರ -2 |
| 7 | ದಕ್ಷಿಣ | ಉಸ್ಮಾನ್‌ಖಾನ್ ರೋಡ್, ಕುಂಬಾರಗುಂಡಿ ಕೇಂದ್ರ -3 |
| 8 | ದಾಸರಹಳ್ಳಿ | ಮೈಲಸಂದ್ರ, ದಾಸರಹಳ್ಳಿ |

ಮೇಲ್ಕಂಡ ಕೇಂದ್ರಗಳ ಪುನರ್ ನವೀಕರಣ ಕಾರ್ಯವು ಚಾಲ್ತಿಯಲಿದ್ದು, 1 ತಿಂಗಳೊಳಗಾಗಿ ಪೂರ್ಣಗೊಳಿಸಿ ತಂಗುದಾಣಗಳನ್ನು ಪ್ರಾರಂಭಿಸಲಾಗುವುದು.

ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವ ಖಾಯಂ ರಾತ್ರಿ ತಂಗುದಾಣಗಳ ವಿವರಗಳು

| ಕ್ರ.ಸಂ | ವಲಯ | ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವ ತಂಗುದಾಣಗಳ ವಿವರ |
|---|---|---|
| 1 | ಪೂರ್ವ | ದೊಮ್ಮಲೂರು |
| 2 | ಪೂರ್ವ | ಪುಲಿಕೇಶಿನಗರ |

ಈ ಮೇಲ್ಕಂಡ ಕೇಂದ್ರಗಳನ್ನು 09 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

---

**ಸಂಖ್ಯೆ: ನಅಇ 158 ಎಂಎನ್‌ಜಿ 2019**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ